O.S.No.:169/2020
P.W.:2

ಈ ದಿನ ದಿಃ12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-</u>

1. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ನೋಟಿಸ್ ಬಂದಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ವಾದಿಯು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ವಾದಿಯು ತನ್ನ ಅನುಭವಕ್ಕೆ ತೊಂದರೆ ಕೊಡುತ್ತಿದ್ದಾರೆಂದು ಹೂಡಿರುತ್ತಾರೆ.

2. ನಾನು ಪಡುವಣಗೆರೆ ಗ್ರಾಮದ ನಿವಾಸಿ ಎಂದರೆ ಸರಿ. ದಾವಾಸ್ವತ್ತಿಗೂ ಪಡುವಣಗೆರೆ ಗ್ರಾಮಕ್ಕೂ 4 ಕೀ.ಮಿ ಅಂತರವಿದೆ. ವಾದಿಯು ದಾವಾಸ್ವತ್ತನ್ನು ಯಾರಿಂದ ಯಾವಾಗ ಖರೀದಿ ಮಾಡಿರುತ್ತಾರೆ ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2002ರಲ್ಲಿ ಅವರು ಮರಿಲಿಂಗೇಗೌಡ ಮತ್ತು ಲಕ್ಷ್ಮಣಗೌಡ ಎನ್ನುವವರಿಂದ ಖರೀದಿಸಿದ್ದರು ಎಂದು ನುಡಿಯುತ್ತಾರೆ. ದಾವಾಸ್ವತ್ತು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ವಾದಿಯು ಖರೀದಿ ಮಾಡುವ ಕಾಲಕ್ಕೆ ಪೋಡಿ, ದುರಸ್ತು, ಸ್ಕೇಚ್, ಅಳತೆ ಆಗಿರಲಿಲ್ಲ ಎಂದರೆ ಸರಿ. ಆದ್ದರಿಂದ ಮರಿಲಿಂಗೇಗೌಡ ಮತ್ತು ಲಕ್ಷ್ಮಣಗೌಡ ರವರು ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದರು ಎಂಬ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಮರಿಲಿಂಗೇಗೌಡ ಮತ್ತು ಲಕ್ಷ್ಮಣಗೌಡ

ರವರು 3ಎಕರೆ ಜಮೀನಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

3. ಮರಿಲಿಂಗೇಗೌಡ ಮತ್ತು ಲಕ್ಷ್ಮಣಗೌಡ ರವರು ತಪ್ಪು ಚಕ್ಕುಬಂದಿಯನ್ನು ನಮೂದಿಸಿ ವಾದಿಗೆ ಸುಳ್ಳು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ನಮೂದಿಸಿದ ಚಕ್ಕುಬಂದಿಯ ನಡುವೆ ಮರಿಲಿಂಗೇಗೌಡ ಮತ್ತು ಲಕ್ಷ್ಮಣಗೌಡ ರವರು ಯಾವತ್ತು ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಯು ದಾವಾಸರ್ವೆ ನಂಬರ್ ನಲ್ಲಿ ತನಗೂ ಜಮೀನು ಮಂಜೂರು ಮಾಡಬೇಕೆಂದು ಸಂಬಂಧಪಟ್ಟ ಇಲಾಖೆಯವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಪೂರ್ವ ಭಾಗಕ್ಕೆ ಬರುವ 1ಎಕರೆ 10 ಗುಂಟೆ ಜಮೀನಿನಲ್ಲಿ ಪ್ರತಿವಾದಿಯು ಉಳುಮೆ ಮಾಡಿಕೊಂಡು ಈಗಲೂ ಸಹ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಜಮೀನುಗಳ ನಡುವೆ ಒಂದು ನಕಾಶೆ ದಾರಿ ಸಹ ಬರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಸಹ ವಾದಿಯು ಒತ್ತುವರಿ ಮಾಡಿಕೊಂಡಿದ್ದಾರೆಂದು ಅವರ ವಿರುದ್ದ ಆರೋಪ ಇದೆ ಎಂದರೆ ಸರಿಯಲ್ಲ.

5. ಪ್ರತಿವಾದಿ ಯಾವ ದಿನಾಂಕ ಮತ್ತು ಸಮಯದಲ್ಲಿ ವಾದಿಗೆ ತೊಂದರೆ ಕೊಡಲು ಬಂದಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯು ವಾದಿಗೆ ತೊಂದರೆ ಕೊಟ್ಟರು ಎಂದು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಹೇಳಿ ಬರೆಸಿಲ್ಲ. ವಾದಿಯ ತೋಟದಲ್ಲಿ ಅವರ ವ್ಯವಹಾರಗಳನ್ನು ನಾನು ನೋಡಿಕೊಳ್ಳುತ್ತೇನೆ ಎಂದರೆ ಸರಿ. ನಾನು ವಾದಿಯ ತೋಟದಲ್ಲಿ ಕೆಲಸ ಮಾಡುವ ಕಾರಣಕ್ಕೆ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 3ಎಕರೆ ಜಮೀನಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. 3ಎಕರೆಯ ಪೈಕಿ 1ಎಕರೆ 10 ಗುಂಟೆ ಜಮೀನಿನಲ್ಲಿ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**